

ಮಾಡಿದರು. ಈ ವರುಷ ಅಡ್ಕ ಸ್ಥಳ ಹೊಳೆಗೆ ಹೊಸ ಸೇತುವೆ ಸ್ಯಾಂಕ್ಷನ್ ಆದೀತೋ? ಯಾವುದಾದರೂ ಜಾಗಕ್ಕೆ ಹೊಸ ಹೈಸ್ಕೂಲು ಬಂದಿತೋ? ಅಡಿಕೆ ಧಾರಣೆ ಎಲ್ಲಿಗೆ ಹೋದೀತು? ಒಮ್ಮೊಮ್ಮೆ ಟೆರಿಲಿನ್ ಬಟ್ಟೆ ಅಂಗಿ ಹಾಕಿದರೆ ಸೆಕೆ ಹೆಚ್ಚೊ ಕಮ್ಮಿಯೊ? ಶಾಲೆ ಹುಡುಗರು ರಸ್ತೆಯಲ್ಲಿ ಸೈಕಲ್ ಬಿಡುವಾಗ ಕಣ್ಣು ಮೋರೆ ಇಲ್ಲದ ಹಾಗೆ ವೇಗವಾಗಿ ಹೋಗುದು ಯಾಕೆ? ಮಕ್ಕಳು ಬಿದ್ದು ಕೈಕಾಲು ಮುರಿದರೆ ಅವರಿಗೆ ತಂದೆ ತಾಯಿ ಕಷ್ಟ ಅರ್ಥ ಆಗುತ್ತದೊ?–ಹೀಗೆ ಬಸ್ಸಿನ ಪಟ್ಟಾಂಗಕ್ಕೆ ವಸ್ತು, ವಿಷಯಗಳ ನಿರ್ಬಂಧ ಇಲ್ಲ. ಒಮ್ಮೊಮ್ಮೆ ಡ್ರೈವರ್ ಸಾಯಿಬ್ಬರ ಪಟ್ಟಾಂಗ ಬಸ್ಸಿನ ವೇಗಕ್ಕಿಂತ ಹೆಚ್ಚು ಮುಂದುವರಿದರೆ, ಕಂಡಕ್ಟರ್ ಮುಂದೆ ಬಂದು ನಾವು 3.30ಕ್ಕೆ ಅಲ್ಲಿಗೆ ತಲುಪಬೇಕಿತ್ತು. ವಿಟ್ಲದಲ್ಲಿ ಟಪ್ಪಾಲು ಹೆಚ್ಚು ಇತ್ತು. ಹಾಗಾಗಿ, ಸ್ವಲ್ಪ ತಡ ಆಗಿದೆ ಎಂದೇನಾದರೂ ಪರೋಕ್ಷವಾಗಿ ಸಮಯ ನೆನಪಿಸುವುದೂ ಇತ್ತು.

ಅಯ್ಯೋ. ನಮ್ಮ ಸಾಯಿಬ್ಬರಿಗೆ ಮಾತು ಅಂದರೆ ಪ್ರೀತಿ. ಚಾ ಕುಡಿದ ಹಾಗೆ ಎಂದು ಹೇಳುವ ಹಿರಿಯರೂ ಇದ್ದರು. “ನಾವೇನೂ ಈ ಸಾಯಿಬ್ಬರನ್ನು ಈಗ ನೋಡುದಾ? 1956ರಲ್ಲಿ ಕಾಸರಗೋಡು ಕೇರಳಕ್ಕೆ ಸೇರಿದಾಗ ನಾವೆಲ್ಲಾ ಇದೇ ಸಾಯಿಬ್ಬರ ಬಸ್ಸಿನಲ್ಲಿ ಕಾಸರಗೋಡಿಗೆ ಹೋಗಿ ಅಲ್ಲಿ ‘ಕಾಸರಗೋಡು ಕನ್ನಡನಾಡು’ ಅಂತ ಮೆರವಣಿಗೆಯಲ್ಲಿ ಬೊಬ್ಬೆ ಹಾಕಿ ಬಂದದ್ದಲ್ಲವಾ?” ಎನ್ನುವ ಕಾಂತಪ್ಪಣ್ಣ ಅವರಲ್ಲಿ ಒಬ್ಬರು. ಹಾಗೆ ಹೇಳಿದ್ದು ಕೇಳಿದ ಇನ್ನೊಬ್ಬರು ಕಾಸರಗೋಡು ಕನ್ನಡನಾಡು ಅಂತ ಬೊಬ್ಬೆ ಹಾಕಿದ್ದು ಮಾತ್ರ ಬಂತು. ಕಾಸರಗೋಡು ಕನ್ನಡ ನಾಡಿನಿಂದ ಹೊರಗೇ ಉಳಿಯಿತಲ್ಲ. ಮುಂದಿನ ಮಕ್ಕಳಿಗೆ ಅದು ಕನ್ನಡ ನಾಡಿನಲ್ಲಿದ್ದದ್ದೇ ತಿಳಿದಿರಲಿಕ್ಕಿಲ್ಲ. ಏನು ಹೇಳ್ತೀರಿ ಕಾಂತಪ್ಪಣ್ಣ ಅಂತ ನಾರಾಯಣ ರೈಗಳೋ, ಕೃಷ್ಣ ಭಟ್ಟರೋ ಕೇಳಿದಾಗ, ಉತ್ತರ ಮಾತ್ರ ಯಾರ ಹತ್ರವೂ ಇಲ್ಲ. ಹೀಗೆ ಅದೊಂದು ಬಸ್ಸಿನ ಲೋಕ.

ಡ್ರೈವರ್ ಸಾಯಿಬ್ಬರದ್ದು ಕೇವಲ ಬಸ್ಸಿನ ಕೆಲಸ ಅಲ್ಲ. ಅವರು ಪ್ರಯಾಣಿಕರಿಗೆ ಸಾಯಿಬ್ಬಣ್ಣ. ಪುತ್ತೂರಲ್ಲಾಗಲಿ, ವಿಟ್ಲದಲ್ಲೇ ಆಗಲಿ ಶಾಲೆ ಓದುವ ಮಕ್ಕಳಿಗೆ ಅವರ ಮನೆಯಿಂದ ಸ್ಕೂಲು ಫೀಸಿನ ಹಣ,